ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

170 :– ಶ್ರೀ ನರೇಂದ್ರ ಬಾಬು ಎನ್.ಎಲ್. (ಮಹಾಲಕ್ಷ್ಮಿ ಲೇಔಟ್): ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ನಗರದಲ್ಲಿ ಮೇಲ್ದರ್ಜೆಗೆ ಏರಿಸಲಾಗಿರುವ ಆಸ್ಪತ್ರೆಗಳು ಯಾವುವು;

(ಆ) ಈ ಆಸ್ಪತ್ರೆಗಳಿಗೆ ಅಗತ್ಯತೆಗೆ ಅನುಸಾರವಾಗಿ ಸಿಬ್ಬಂದಿಯನ್ನು ಒದಗಿಸಲಾಗಿದೆಯೇ;

(ಇ) ಈ ಆಸ್ಪತ್ರೆಗಳಿಗೆ ಹಾಸಿಗೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ;(ವಿವರ ನೀಡುವುದು);

(ಈ) ಇದಕ್ಕಾಗಿ ಮೀಸಲಿಟ್ಟ ಅನುದಾನ ಎಷ್ಟು ಹಾಗೂ ವೆಚ್ಚವಾದ ಮೊತ್ತ ಎಷ್ಟು (ವಿವರ ನೀಡುವುದು);

(ಉ) ಈ ಆಸ್ಪತ್ರೆಗಳಿಗೆ ಅಗತ್ಯವಿರುವ ಔಷಧಿಗಳ ಪ್ರಮಾಣವೆಷ್ಟು; ಇದಕ್ಕಾಗಿ ಹೆಚ್ಚುವರಿ ಅನುದಾನವನ್ನು ನೀಡಲಾಗಿದೆಯೇ;

(ಊ) ಈ ಆಸ್ಪತ್ರೆಗಳ ಪೀಠೋಪಕರಣಗಳಿಗೆ ನೀಡಲಾದ ಅನುದಾನವೆಷ್ಟು (ವಿವರ ನೀಡುವುದು);

(ಋ) ಈ ಆಸ್ಪತ್ರೆಗಳಿಗೆ ಪ್ರತಿ ನಿತ್ಯ ಬರುವ ಹೊರ ಮತ್ತು ಒಳ ರೋಗಿಗಳು ಎಷ್ಟು (ವಿವರ ನೀಡುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

(ಅ) ಬೆಂಗಳೂರು ನಗರದಲ್ಲಿ ಆರೋಗ್ಯ ಮತ್ತು ಕುಟುಂಬ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಪ್ರಾಥಮಿಕ ಆರೋಗ್ಯ ಕೇಂದ್ರಗಳು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ 2007–08ನೇ ಸಾಲಿನಲ್ಲಿ ಮೇಲ್ದರ್ಜೆಗೇರಿಸಲಾಗಿದೆ.

1) ಕಾಡುಗೊಂಡನಹಳ್ಳಿ

2) ಅಬ್ಬಿಗೆರೆ

3) ಕೆಂಗೇರಿ ಉಪನಗರ

(ಆ) ಈ ಆಸ್ಪತ್ರೆಗಳಿಗೆ ಅಗತ್ಯತೆಗನುಸಾರವಾಗಿ ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

1) ಕಾಡುಗೊಂಡನಹಳ್ಳಿ – 23 ಹುದ್ದೆಗಳು

2) ಅಬ್ಬಿಗೆರೆ – 34 ಹುದ್ದೆಗಳು

3) ಕೆಂಗೇರಿ ಉಪನಗರ – 34 ಹುದ್ದೆಗಳು

ಕಟ್ಟಡ ಕಾಮಗಾರಿಯು ಶೇಕಡ 60ರಷ್ಟು ಪೂರ್ಣಗೊಂಡನಂತರ ಈ ಹೆಚ್ಚುವರಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹತೆ ಪಡೆಯುತ್ತದೆ. ಸದ್ಯಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಸಿಬ್ಬಂದಿರವರು ಕರ್ತವ್ಯ ನಿರ್ವಹಿಸಿರುತ್ತಾರೆ.

(ಇ) 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣೆ ಪ್ರಾಯೋಜನೆ ವತಿಯಿಂದ ಕಟ್ಟಡ ಕಾಮಗಾರಿ ಕೆಲಸವನ್ನು ಕೈಗೊಳ್ಳಲಾಗುತ್ತಿದೆ.

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಮೀಸಲಿಟ್ಟ ಅನುದಾನ ರೂ. ಲಕ್ಷ	ವೆಚ್ಚವಾದ ಮೊತ್ತ ರೂ. ಲಕ್ಷ
1	ಕಾಡುಗೊಂಡನಹಳ್ಳಿ	150 – 00	55.00
2	ಅಬ್ಬಿಗೆರೆ	171 – 00	–
3	ಕೆಂಗೇರಿ ಉಪನಗರ	175 – 00	–

(ಈ) ಅಬ್ಬಿಗೆರೆ ಕಟ್ಟಡ ಕಾಮಗಾರಿಗಳಿಗಾಗಿ ನಕ್ಷೆ ಮತ್ತು ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದೆ. ಕೆಂಗೇರಿ ಉಪನಗರದಲ್ಲಿ ಸಮುದಾಯ ಆರೋಗ್ಯ ಕೇಂದ್ರ ನಿರ್ಮಿಸಲು ಸೂಕ್ತ ನಿವೇಶನ ಒದಗಿಸಲು ಜಿಲ್ಲಾ ಪಂಚಾಯತ್ ಸಭೆಯಲ್ಲಿ ಅನುಮೋದಿಸಬೇಕಾಗಿರುತ್ತದೆ.

(ಉ) ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ರೂ.1.00 ಲಕ್ಷ ಅನುದಾನ ಔಷಧಿಗಾಗಿ ನಿಗಧಿ ಪಡಿಸಲಾಗಿದೆ. ಹಾಗೂ ಈ ಸಂಸ್ಥೆಗಳ ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಹೆಚ್ಚುವರಿಯಾಗಿ ರೂ.3.00 ಲಕ್ಷ ಅನುದಾನ ಅಂದರೆ ಒಟ್ಟು ರೂ.4.00 ಲಕ್ಷ ಮೊತ್ತದ ಔಷಧಿಗಳನ್ನು ಪಡೆಯಲು ಅರ್ಹತೆ ಪಡೆಯುತ್ತದೆ.

(ಊ) ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಅನಾವರ್ತಕ ವೆಚ್ಚಗಳಾದ ಪೀಠೋಪಕರಣ, ಲಿನಿನ್, ಇತರೆ ಅಗತ್ಯ ಉಪಕರಣಗಳಿಗಾಗಿ ಅನುದಾನವನ್ನು ನಿಗಧಿಪಡಿಸಲು ಅರ್ಹತೆ ಪಡೆಯುತ್ತದೆ.

(ಖ) ಈ ಆಸ್ಪತ್ರೆಗಳಿಗೆ ಬರುವ ರೋಗಿಗಳ ಸರಾಸರಿ ಸಂಖ್ಯೆ ಕೆಳಕಂಡಂತಿದೆ:–

1	ಕಾಡುಗೊಂಡನಹಳ್ಳಿ	ಮಾಹೆಯಾನ – 850	–
2	ಅಬ್ಬಿಗೆರೆ	ಮಾಹೆಯಾನ – 625	25
3	ಕೆಂಗೇರಿ ಉಪನಗರ	ಮಾಹೆಯಾನ – 750	–

ಪ್ರಶ್ನೆ ಸಂಖ್ಯೆ 170

(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಎನ್.ಎಲ್. ನರೇಂದ್ರ ಬಾಬು: ಬೆಂಗಳೂರು ನಗರದಲ್ಲಿ 75–80 ಲಕ್ಷ ಜನರು ಸರ್ಕಾರಿ ಆಸ್ಪತ್ರೆಗಳ ಮೇಲೆ ಅವಲಂಬನೆಯಾಗಿರುತ್ತಾರೆ. ಅದರಲ್ಲಿ ಬೆಂಗಳೂರು ಮಹಾ ನಗರದ ವ್ಯಾಪ್ತಿಯಲ್ಲಿ ಎಷ್ಟು ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲ್ಪಟ್ಟಿದೆ ಎಂದು ನಾನು ಕೇಳಿದ್ದರೆ ಅವರು ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಅಧಿಕಾರಿಗಳು ಸಚಿವರನ್ನು ಮತ್ತು ಸದನವನ್ನು ಯಾವ ರೀತಿಯಾಗಿ ಯಾಮಾರಿಸುತ್ತಾರೆಂಬುದು ಇದರಿಂದ ಗೊತ್ತಾಗುತ್ತದೆ. ಬೆಂಗಳೂರಿನಲ್ಲಿ ಇವತ್ತು ಜನ ಆಸ್ಪತ್ರೆಗೆ ಹೋಗಬೇಕೆಂದರೆ ನಿಜವಾಗಿಯೂ ಭಯ ಪಡುತ್ತಾರೆ ಏಕೆಂದರೆ, ಇವತ್ತು ಎಲ್ಲಾ ಕಡೆ ಖಾಸಗಿ ಹೈಟೆಕ್ ಆಸ್ಪತ್ರೆಗಳು ಬಂದಿವೆ. ಸರ್ಕಾರಿ ಆಸ್ಪತ್ರೆಗಳು, ಕೆ.ಸಿ ಜನರಲ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ, ವಾಣಿವಿಲಾಸ ಆಸ್ಪತ್ರೆ, epidemic disease ಆಸ್ಪತ್ರೆಗಳಲ್ಲಿ ಯಾವ್ಯಾವುದನ್ನು ಮೇಲ್ದರ್ಜೆಗೇರಿಸಲಾಗಿದೆ ಎನ್ನುವ ಪ್ರಶ್ನೆಗೆ ತಾವು ದಯಮಾಡಿ ಉತ್ತರ ಕೊಡಬೇಕು. ಆದರೆ ಈ ಉತ್ತರ ಕೊಟ್ಟಿರುವಂತಹದ್ದು ಸಮಂಜಸವಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆ ಬಹಳ ಸರಿಯಾಗಿದೆ. ಆದಷ್ಟು ಬೇಗ ಯಾವ್ಯಾವ ಆಸ್ಪತ್ರೆಗಳನ್ನು ಬೆಂಗಳೂರಿನಲ್ಲಿ ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಬೇಕೆನ್ನುವ ಸಂಪೂರ್ಣವಾದ ವಿವರವನ್ನು ತಮಗೆ ಒದಗಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎನ್.ಎಲ್. ನರೇಂದ್ರ ಬಾಬು: ಸಚಿವರ ಕಾಳಜಿಗೆ ಧನ್ಯವಾದಗಳು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ICU Unitನಲ್ಲಿ 5 bed ಇವೆ. ಅದರಲ್ಲಿ 3 ಯಾವಾಗಲೂ ಕೆಲಸ ಮಾಡುವುದಿಲ್ಲ.

ಕಾರಣ ಕೇಳಿದರೆ ನಮ್ಮಲ್ಲಿ ನರ್ಸ್‌ಗಳು, ಇಲ್ಲವೆಂದು ಹೇಳುತ್ತಾರೆ. ಒಂದು ಸಾರಿ ನನ್ನ ಕ್ಷೇತ್ರದಲ್ಲಿಯೇ ರವೆ ರೊಟ್ಟಿ ತಿಂದು 15 ಜನ hospitalize ಆದರು. ಆದರೆ, ಅವರು ಖಾಸಗಿ ಆಸ್ಪತ್ರೆಗೆ ಹೋಗಲಿಕ್ಕೆ ಆಗಲಿಲ್ಲ. ಏಕೆಂದರೆ, ಮೊದಲು ದುಡ್ಡು ಕಟ್ಟಿದರೆ ಮಾತ್ರ ಖಾಸಗಿಯವರು ದಾಖಲಿಸಿಕೊಳ್ಳುತ್ತಾರೆ. ಬಡವರಿಗೆ ಸರ್ಕಾರಿ ಆಸ್ಪತ್ರೆಗಳು ಎಟುಕುವ ಸ್ಥಿತಿಯಲ್ಲಿ ಇಲ್ಲ. ನೂರಾರು ವರ್ಷಗಳ ಇತಿಹಾಸವಿರುವ ಬೌರಿಂಗ್ ಆಸ್ಪತ್ರೆಯನ್ನು up-date ಮಾಡಬೇಕಾಗಿದೆ. ದಯವಿಟ್ಟು ಆಸ್ಪತ್ರೆಗಳಲ್ಲಿ ICU provide ಮಾಡಿ. ಬೆಂಗಳೂರು ನಗರದಲ್ಲಿ ಹೈಟೆಕ್ ಆಸ್ಪತ್ರೆಗಳಿವೆ. ಆದರೆ ಆ ಆಸ್ಪತ್ರೆಗಳು ಬಡವರಿಗೆ, ಮಧ್ಯಮವರ್ಗದವರಿಗೆ ಅಲ್ಲ. ಆದ್ದರಿಂದ ತಾವು ಕಾಳಜಿ ವಹಿಸಿ ಆದಷ್ಟು ಬೇಗ ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ 16 ಜನ ವೈದ್ಯರು, 30 ಜನ ನರ್ಸ್‌ಗಳು shortage ಇದ್ದಾರೆ.ವಿಕ್ಟೋರಿಯಾ ಆಸ್ಪತ್ರೆಯಲ್ಲಿಯೂ ಅದೇ ಸ್ಥಿತಿ ಇದೆ. ದಯವಿಟ್ಟು ಆಸ್ಪತ್ರೆಗಳನ್ನು ಉನ್ನತೀಕರಿಸಬೇಕು. ಇಲ್ಲದೇ ಹೋದರೆ ಆಸ್ಪತ್ರೆಗಳು show case ನಲ್ಲಿ ಇಟ್ಟ show piece ಗಳಾಗುತ್ತವೆಯೇ ಹೊರತು ಬಡವರಿಗೆ ಮಧ್ಯಮವರ್ಗದವರಿಗೆ ಎಟುಕದಂತಹ ಆರೋಗ್ಯವಾಗುತ್ತದೆ. ಬೆಂಗಳೂರು ನಗರಕ್ಕೆ ಬೆಂಗಳೂರಿನವರೇ ಅಲ್ಲದೆ ರಾಜ್ಯಾದ್ಯಂತ ರೋಗಿಗಳು ಬರುತ್ತಾರೆ. 2000ಕ್ಕೆ W.H.O ನವರು ಎಲ್ಲರಿಗೂ ಆರೋಗ್ಯವೆಂದು ಹೇಳಿದರು. ಆದರೆ ಕನಿಷ್ಠ ಆರೋಗ್ಯವೂ ಸಿಗಲಿಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ದಯವಿಟ್ಟು ಸಹಾಯ ಮಾಡಬೇಕೆಂದು ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರಿಗೆ ನಾನು ವಿನಂತಿ ಮಾಡುವುದು ಏನೆಂದರೆ, ಬೆಂಗಳೂರು ನಗರ ಹೈಟೆಕ್ ನಗರವಿದೆ. ಮಾಗಡಿ ರಸ್ತೆಯಲ್ಲಿ ಲೆಪ್ರಸಿ ಆಸ್ಪತ್ರೆ ಇದೆ ಅದರ ಬಗ್ಗೆ ನಾವು 15 ವರ್ಷದಿಂದ ಬೆಳಕನ್ನು ಚೆಲ್ಲುತ್ತಿದ್ದೇವೆ. ಆದರೆ ಅದಕ್ಕೆ ಯಾವುದೇ ಕಾಯಕಲ್ಪ ಬಂದಿಲ್ಲ. ನಾವು ಇಲ್ಲಿ ಕುಳಿತುಕೊಂಡು ಮಾತನಾಡುವ ಬದಲು ತಾವು ಬೆಂಗಳೂರು ನಗರದಲ್ಲಿ ಸರ್ಕಾರಿ ಆಸ್ಪತ್ರೆಗಳು, ದೊಡ್ಡ ಆಸ್ಪತ್ರೆಗಳು ಏನಿವೆ ಅದು ವಿಕೋರಿಯಾ, ಕೆ.ಸಿ. ಜನರಲ್ ಇರಬಹುದು ಅಲ್ಲಿಗೆ ಹೋಗಿ ಬಂದು ಅವುಗಳ ಪರಿಸ್ಥಿತಿಯ ಬಗ್ಗೆ ವಿಧಾನಸಭೆ ಅಧಿವೇಶನ ಮುಗಿದ ಮೇಲೆ ಬೆಂಗಳೂರಿನ ಎಲ್ಲಾ ಸದಸ್ಯರ ಒಂದು ಸಭೆ ಕರೆದು ಅವುಗಳ ಅಭಿವೃದ್ಧಿ ಮಾಡಲಿಕ್ಕೆ ಏನಾದರೂ ಸಾಧ್ಯವಿದೆಯೇ ಎನ್ನುವುದನ್ನು ಚರ್ಚೆ ಮಾಡಬೇಕು. ದಯಮಾಡಿ ಅವುಗಳನ್ನು ಮೇಲ್ದರ್ಜೆಗೇರಿಸಲು ಏನಾದರೂ time bond ಕಾರ್ಯಕ್ರಮವಿದೆಯೇ ಎಂದು ತಿಳಿಸಬೇಕು.

ಶ್ರೀ ಬಿ. ಶ್ರೀರಾಮುಲು: ಆದಷ್ಟು ಬೇಗನೆ ಎಲ್ಲಾ ಶಾಸಕರನ್ನು ಕರೆದು ಸಭೆಯನ್ನು ನಡೆಸಿ ಕೆ.ಸಿ. ಜನರಲ್ ಆಸ್ಪತ್ರೆ, ವಿಕ್ಟೋರಿಯಾ, ಬೌರಿಂಗ್ ಅಥವಾ ಇನ್ಯಾವುದೇ ಆಸ್ಪತ್ರೆಗಳಲ್ಲಿ ವೈದ್ಯರ, ನರ್ಸ್‌ಗಳ ಕೊರತೆ ಇರಬಹುದು ಹಾಗೂ ಬಡವರಿಗೆ ಯಾವ ರೀತಿಯ ಸೌಲಭ್ಯ, ಚಿಕಿತ್ಸೆ ಸಿಗಬೇಕು, ಎನ್ನುವುದರ ಬಗ್ಗೆ ಚರ್ಚೆ ಮಾಡೋಣ. ಮೊನ್ನೆ ನಾನು ಕೆ.ಸಿ. ಜನರಲ್ ಆಸ್ಪತ್ರೆಗೆ ಹೋಗಿದ್ದೆ ಅಲ್ಲಿ ಬಡವರು ಬಹಳ ನೋವನ್ನು ಪಟ್ಟರು. ಆಗ ನಾನು ಅಲ್ಲಿದ್ದ ವೈದ್ಯರಿಗೆ ಈ ರೀತಿ ಮುಂದೆ ನಡೆದುಕೊಳ್ಳಬಾರದು. ಮುಂಬರುವ ದಿನಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಬಡವರು ನೋವು ಪಡಬಾರದು ಎನ್ನುವ ವಿಷಯ ತಿಳಿಸಿದೆ. ಆದಷ್ಟು ಬೇಗನೆ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಾಗಿ ತಿಳಿಸುತ್ತೇನೆ.

ವಿದ್ಯಾರ್ಥಿ ನಿಲಯಗಳಲ್ಲಿ ಸಿಬ್ಬಂದಿ ನೇಮಕಾತಿ

68:– ಶ್ರೀ ಕುಮಾರಸ್ವಾಮಿ ಹೆಚ್.ಕೆ.:–ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ:ವರ್ಗಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ 3ನೇ ದರ್ಜೆ ಮತ್ತು 4ನೇ ದರ್ಜೆ ಹುದ್ದೆಗಳ ಸಂಖ್ಯೆ ಎಷ್ಟು?

(ಆ) ಖಾಲಿ ಇದ್ದಲ್ಲಿ ಯಾವಾಗ ಭರ್ತಿ ಮಾಡಲಾಗುವುದು;

(ಇ) ಈ ನಿಲಯಗಳಲ್ಲಿ ಬೆಲೆ ಏರಿಕೆಗೆ ಅನುಗುಣವಾಗಿ ಮಾಸಿಕ ನಿರ್ವಹಣ ವೆಚ್ಚವನ್ನು ಹೆಚ್ಚಿಸಲಾಗುವುದೆ?

ಶ್ರೀ ಡಿ. ಸುಧಾಕರ (ಸಮಾಜ ಕಲ್ಯಾಣ ಸಚಿವರು):–

ಸಮಾಜ ಕಲ್ಯಾಣ ಇಲಾಖೆ:

I	ಸಮೂಹ	1) ಸೀನಿಯರ್ ವಾರ್ಡನ್	–	27
	–ಸಿ	2) ವಾರ್ಡನ್	–	449
II	ಸಮೂಹ	1) ಅಡುಗೆಯವರು	–	1148
	ಡಿ	2) ಅಡುಗೆ ಸಹಾಯಕರು	–	922
	ಹುದ್ದೆ	3) ರಾತ್ರಿ ಕಾವಲುಗಾರರು	–	303
		ಒಟ್ಟು	**-**	**2849**